ಮಂದಿರದವರ, ಶ್ರೀಮಂತರ ಸಾಲು ಸಾಲು ಸಲಾಮ್‌ಗಳು. ನನ್ನ ಅದೃಷ್ಟವೋ, ಮಕ್ಕಳದ್ದೋ. ಮೊದಲಿನಿಂದಲೂ ನಾನು ಬಯಸಿದ ಫುಡ್‌ಸೆಕ್ಷನ್, ಪರ್ಮಿಟ್‌ಸೆಕ್ಷನ್, ಎಸ್ಟಾಬ್ಲಿಷ್– ಇಂಥ ಸೆಕ್ಷನ್‌ಗಳೇ ನನ್ನ ಕೈವಶವಾಗಿ ಖಾಲಿ ಜೇಬಿನಲ್ಲಿ ಕೈಯಿಟ್ಟು ಹ್ಯಾಪ್‌ಮೋರೆ ಹಾಕಿ ಒಂದು ದಿನವೂ ಮನೆಗೆ ಬಂದಿದ್ದಿಲ್ಲ. ಬಜಾರಿನಲ್ಲಿ, ಆಫೀಸಿನಲ್ಲಿ ನನಗೆ ಸಿಗುವ ಗೌರವ ಒಬ್ಬ ಗೆಜೆಟೆಡ್ ಅಧಿಕಾರಿಗೂ ದುರ್ಲಭ. ಆದರೆ ಮನೆಯಲ್ಲಿ ನನ್ನ ಬುದ್ಧಿವಂತಿಕೆ, ಗಳಿಕೆ, ಶ್ರಮ ಯಾವುದಕ್ಕೂ ಬೆಲೆಯಿಲ್ಲ, ಗೌರವವೂ ಇಲ್ಲ. ಮನೆ ಯುದ್ಧ ಸಾರಿದ ರಣರಂಗ. ಕೇಳಿದಷ್ಟು ಹಣ ಕೊಡದಿದ್ದರೆ, ಕೇಳಿದ ಸೀರೆ ಬಟ್ಟೆಗಳಲ್ಲಿ ಚೌಕಾಸಿ ಮಾಡಿದರೆ ಸಾಕು– ಕಾದಾಟ. 'ಏನು ಮಹಾ ಬೆವರು ಸುರಿಸಿ ದುಡ್ಡಿರೋದು ನೀವು. ಹಂಗೆ ಬರುತ್ತೆ ಹಿಂಗ್ ಹೋಗ್ಲಿ. ಮಕ್ಕಳು ಕೇಳತವೆ. ಒಂದ್ಹತ್ತು ಹೆಚ್ಚು ಕೊಡಿ'– ಈಕೆ ದಬಾಯಿಸುತ್ತಾಳೆ. 'ಲಂಚದ ಹಣವಾದರೆ ನನಗೆ ಒಂದು 'ಪೈ' ಕೂಡ ಬೇಡ. ಸಂಬಳದ ಹಣದಿಂದ ಕೊಡೋದಾದ್ರ ಮಾತ್ರ ನಾನು ತಕ್ಕೊಳ್ಳೋದು'– ಕಟುಕಿಯಾಡುತ್ತಾಳೆ ಎರಡನೆಯ ಮಗಳು ಶೀಲ. ಹೀಗಂದರೂ ಎಲ್ಲರಿಗಿಂತ ಹೆಚ್ಚು ವಸೂಲಿ ಮಾಡುವ ತಾಕತ್ ಇರೋದು ಅವಳಿಗೇ. ಅವಳೆಂದರೆ ನನಗೂ ಒಂದಿಷ್ಟು ಹೆಚ್ಚು ಪ್ರೇಮವೆ. ಮೊದಲನೆಯವಳು ಅವರಮ್ಮನ ಹಾಗೆ ಕೋಲು ಮುಖ, ಚೂಪುಮೂಗು, ಬಡಕಲು ದೇಹ. ಕಪ್ಪು ಕೂಡ. ಆದರೆ ಎರಡನೆಯವಳು ಒಳ್ಳೆ ಬಿಳಿಪು. ನನ್ನ ಹಾಗೆ ಒಳ್ಳೇ ಅಂಗಸೌಷ್ಠವ. ಅವಳ ಕಣ್ಣಿಂದ ಹನಿ ನೀರೂ ಬಾರದಂತೆ ಹೆಗಲಮೇಲೆತ್ತಿದವನು ಇಳಿಸದೇ ಸಾಕಿದ್ದೇನೆ ಈ ಗಯ್ಯಾಳೀನ. ಆದರೆ ಈಗ ನನಗೇ ಉರುಲಾಗಿ ಕೂತಿದ್ದಾಳೆ. ಅವಳನ್ನು ಅತಿಮುದ್ದಿನಿಂದ ಸಾಕಿದ್ದರಲ್ಲೋ, ಫ್ರೀಯಾಗಿ ಬೆಳಸಿದ್ದರಲ್ಲೋ, ಕಾಲೇಜ್ ಓದಿಸಿದ್ದರಲ್ಲೋ ಎಲ್ಲೋ ಒಂದೆಡೆ ತಪ್ಪಾಗಿದೆ.

ಇವಳ ಪ್ರೇಮದಾಟವನ್ನು ಮೊದಮೊದಲು ಹುಡುಗಾಟ ಎಂತಲೆ ಅಷ್ಟೊಂದು ಸೀರಿಯಸ್ ಆಗಿ ತಕ್ಕೊಳ್ಳಲಿಲ್ಲ. ಮೊದಲನೆಯವಳೂ ಹೀಗೆ. ಕಾಲೇಜಿನ ಮೊದಲ ವರ್ಷದಲ್ಲೇ ಸಾಬರ ಹುಡುಗನ ಜೊತೆ ಅಲೆಯೋದು ಗೊತ್ತಾಗಿ, ಅವನ ಮೇಲೆ ಹಿಂದೂ ಹುಡುಗರು ಎರಗಿ ಸಣ್ಣಗಲಭೆಯಾದಾಗ ನಾನೇ ಮೊದಲನೆಯವಳನ್ನ ಕಾಲೇಜ್ ಬಿಡಿಸಿ ಮನೆ ಕೆಲಸಕ್ಕೆ ಹಾಕಿಕೊಳ್ಳಲು ಹೇಳಿದ್ದೆ. ಭಾಗ್ಯ ನನ್ನ ಮಾತಿಗೆ ಎಂದೂ ಎದುರಾಡಿದವಳಲ್ಲ. ಆಡುವಷ್ಟು ಬುದ್ಧಿಯೂ ಅವಳಿಗಿಲ್ಲ. ಹೆಣ್ಣುಮಕ್ಕಳು ತಮ್ಮ ಬಾಯ್ ಫ್ರೆಂಡ್‌ಗಳನ್ನ ಮನೆಗೆ ಕರೆತಂದರೆ ತಿಂಡಿ, ಕಾಫಿ ಕೊಟ್ಟು ಎಂಜಲು ತೆಗೆದಳೇ ವಿನಹ ಇದು ತಪ್ಪು ಎಂದು ಎಂದೂ ಮಕ್ಕಳಿಗೆ ತಿಳಿಹೇಳಿದವಳಲ್ಲ. ಪೆದ್ದು ಹೆಂಗಸು. ರಾಧ ಈಗ ವಾಸಿ. ತಾಯಿಯ ಜೊತೆ ರಾಯರ ಮಠ, ಪುರಾಣ, ಪ್ರವಚನಗಳಿಗೆ ಹೋಗೋದು, ಲೈಬ್ರರಿಯಿಂದ ಪುಸ್ತಕ ತಂದು ಓದೋದು ಇತ್ಯಾದಿ ಮಾಡುತ್ತಾಳೆ. ಆದರೆ ಈ ಎರಡನೆಯವಳು ಪತ್ರಿಕೆಗಳಿಗೆ ಕತೆ ಬರೆಯಲು ತೊಡಗಿದಾಗ, ಕಥೆಗಳಲ್ಲಿ ಜಾತಿ, ಮತ, ಮೌಢ್ಯ ಸಂಪ್ರದಾಯಗಳ ವಿರುದ್ಧ ಸಿಡಿದೇಳುವಾಗ ಸ್ವಲ್ಪ ಕಸಿವಿಸಿ, ಇರುಸು ಮುರುಸು. ಬರೆಹ ಏನಂದರೂ ಬರಹವೆ. ರಂಜಿಸೋದು, ರೇಗಿಸೋದು ಅದರ ಉದ್ದೇಶ. ಅಷ್ಟಾದರೆ ಬರೆದದ್ದರ ಸಾರ್ಥಕತೆ ಆಯಿತೆಂದೇ ನನ್ನ ಭಾವನೆ. ಆದರೆ ಶೀಲ 'ಬರಹ–ಬದುಕು' ಎರಡನ್ನೂ ಒಂದೇ ರೀತಿಯಲ್ಲಿ ರೂಪಿಸಲು ತೊಡಗಿದ್ದಾಳೆಂಬ ಗುಮಾನಿ ಬಂದಾಗ ಮಾತ್ರ ಜಂಘಾಬಲ ಹುದುಗಿತ್ತು.

ಸಣ್ಣಗೆ ಮಳೆ ಬರುವಾಗ ಜಗಲಿಯ ಮೇಲೆ ನಿಂತು ಕತ್ತಲಲ್ಲಿ ಕಣ್ಣಾಡಿಸುತ್ತೇನೆ. ಮದುವೆ ಮನೆಯಲ್ಲಿನ ಬೆಳಕನ್ನು ಬಿಟ್ಟರೆ ಬಾಕಿಯೆಲ್ಲ ಕತ್ತಲಲ್ಲಿ ಮುಚ್ಚಿಹೋಗಿದೆ. ಒಂದು ಮನೆಯೂ